ಓ.ಎಸ್. 439/2017
ಪಿ.ಡಬ್ಲ್ಯೂ-1

ದಿನಾಂಕಃ **20.09.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಹೆಚ್. ವಕೀಲರಿಂದಃ

ಪ್ರತಿವಾದಿಗಳು ನಮಗೆ ತೊಂದರೆ ನೀಡಿದ್ದರಿಂದ ಈ ದಾವೆಯನ್ನು ಹೂಡಿರುತ್ತೇವೆ. ದಾವಾ ಸ್ವತ್ತನ್ನು ನನ್ನ ಗಂಡ ಖರೀದಿ ಮಾಡಿರುತ್ತಾರೆ. ನನ್ನ ಗಂಡ ಸರ್ವೆ ನಂ. 149/14 ರಲ್ಲಿ 18 ಗುಂಟೆ ಖರೀದಿ ಮಾಡಿರುತ್ತಾರೆ. ಸದರಿ ಜಮೀನಿನ ಪೂರ್ವಕ್ಕೆ-ಹನುಮಂತಪ್ಪನವರ ಜಮೀನು , ಪಶ್ಚಿಮಕ್ಕೆ- ಲಕ್ಷ್ಮೀನರಸಪ್ಪನವರ ಜಮೀನು, ಉತ್ತರಕ್ಕೆ-ಗಂಗಾಧರಪ್ಪನವರ ಜಮೀನು, ದಕ್ಷಿಣಕ್ಕೆ-ಆದಿಲಕ್ಷ್ಮಮ್ಮನವರ ಜಮೀನು ಇರುತ್ತದೆ. ಸರ್ವೆ ನಂ. 149/13 ನ್ನು ಸಹ ನಾವೇ ಖರೀದಿ ಮಾಡಿರುತ್ತೇವೆ ಎಂದರೆ ಸರಿ. ಸರ್ವೆ ನಂ. 149/13 ದಾವಾ ಸ್ವತ್ತಿನ ಪೂರ್ವ ದಿಕ್ಕಿನಲ್ಲಿರುತ್ತದೆ. ಸರ್ವೆ ನಂ. 149/13 ಎಷ್ಟು ಗುಂಟೆ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

**2.** ದಾವಾ ಸ್ವತ್ತನ್ನು ಖರೀದಿ ಮಾಡುವ ಸಮಯದಲ್ಲಿ ಅಳತೆ ಮಾಡಿಸಿರುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆ ಆದರೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 149 ರಲ್ಲಿ ಎಷ್ಟು ಪೋಡಿಗಳಾಗಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ನಾವು ಖರೀದಿ ಮಾಡಿರುವಂತಹ ಸರ್ವೆ ನಂ. 149/13 ರಲ್ಲಿನ 20 ಗುಂಟೆ ಜಮೀನಿನಲ್ಲಿ 3 ಗುಂಟೆ ಖರಾಬು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.149/13 ಮತ್ತು ಸರ್ವೆ ನಂ. 149/14 ರ ಪಕ್ಕದಲ್ಲಿ ಭೋವಿ ಕಾಲೋನಿ ಇರುತ್ತದೆ ಎಂದರೆ ಸರಿ. ಸರ್ವೆ ನಂ.149/13 ಮತ್ತು ಸರ್ವೆ ನಂ. 149/14 ಗಳನ್ನು ನಾವು ಖರೀದಿ ಮಾಡಿದ ನಂತರ ನನ್ನ ಗಂಡ ಅಳತೆ ಮಾಡಿಸಿರುತ್ತಾರೆ, ಆದರೆ ನನಗೆ ಗೊತ್ತಿರುವುದಿಲ್ಲ.

**3.** ಪ್ರತಿವಾದಿಗಳು ದಾವಾ ಸ್ವತ್ತಿನ ಪೂರ್ವ ದಿಕ್ಕಿನಲ್ಲಿ ಒತ್ತುವರಿ ಮಾಡಲು ಪ್ರಯತ್ನಿಸಿರುತ್ತಾರೆ. ಪ್ರತಿವಾದಿಗಳು ದಾವಾ ಸ್ವತ್ತನ್ನು ಒತ್ತುವರಿ ಮಾಡಲು ಪ್ರಯತ್ನಿಸಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿಗಳು ಭೋವಿ ಕಾಲೋನಿಯಲ್ಲಿ ದನ-ಕರುಗಳನ್ನು ಕಟ್ಟುತ್ತಿದ್ದರು, ನಾವು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತನ್ನು ಒತ್ತುವರಿ ಮಾಡಲು ಪ್ರಯತ್ನಿಸಿದಾಗ ಪ್ರತಿವಾದಿಗಳ ದೂರನ್ನು ಸಲ್ಲಿಸಿರುತ್ತೇವೆ. ದೂರನ್ನು 5 ವರ್ಷಗಳ ಹಿಂದೆ ನೀಡಿರುತ್ತೇವೆ ಆದರೆ ದಿನಾಂಕ ಹೇಳಲು ಆಗುವುದಿಲ್ಲ.

**4.** ನಮ್ಮ ಜಮೀನು ಮತ್ತು ಭೋವಿ ಕಾಲೋನಿ ಮಧ್ಯೆ ರಸ್ತೆ ಇರುತ್ತದೆ ಎಂದರೆ ಸರಿ. ಪ್ರತಿವಾದಿಗಳು ನಮಗೆ ಯಾವುದೇ ತೊಂದರೆ ಕೊಡದೇ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ನನ್ನ ಗಂಡ ಹೂಡಿರುವಂತಹ ಸುಳ್ಳು ದಾವೆಗೆ ಪೂರಕವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ